8. 1990-91ನೇ ಸಾಲಿನ ಮೈಸೂರು ಪೈಂಟ್ಸ್ ಮತ್ತು ವಾರ್‌ನಿಷ್ ನಿಯಮಿತದ 45ನೇ ವಾರ್ಷಿಕ ವರದಿ;

9. 1991-92ನೇ ಸಾಲಿನ ಎನ್‌ಜಿಎಫ್ ನಿಯಮಿತದ 27ನೇ ವಾರ್ಷಿಕ ವರದಿ ಮತ್ತು ಲೆಕ್ಕಗಳು;

10. 1991-92ನೇ ಸಾಲಿನ ಮೈಸೂರು ಮಿನರಲ್ಸ್ ನಿಯಮಿತದ 26ನೇ ವಾರ್ಷಿಕ ವರದಿ;

11. 1990-91 ಮತ್ತು 1991-92ನೇ ಸಾಲುಗಳ ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ ನಿಯಮಿತದ 11 ಮತ್ತು 12ನೇ ವಾರ್ಷಿಕ ವರದಿ (ವಿಳಂಬಕ್ಕೆ ಕಾರಣಗಳೊಂದಿಗೆ);

12. 1991-92ನೇ ಸಾಲಿನ ಕಾಸ್ಮೆಟಿಕ್ಸ್ ನಿಯಮಿತದ 26ನೇ ವಾರ್ಷಿಕ ವರದಿ (ವಿಳಂಬಕ್ಕೆ ಕಾರಣಗಳೊಂದಿಗೆ);

13. 1991-92ನೇ ಸಾಲಿನ ಮಾರ್ಕೆಟಿಂಗ್ ಕನ್ಸಲ್‌ಟೆಂಟ್ಸ್ ಮತ್ತು ಏಜೆನ್ಸೀಸ್ ನಿಯಮಿತದ 20ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ ಹಾಗೂ

<u>1956ನೇ ಸಾಲಿನ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳ ಅಧಿನಿಯಮ 26ನೇ ಕಲಮಿನ ಮೇರೆಗೆ:</u>

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕಾ ಮಂಡಳಿಯ 1988-89 ಮತ್ತು1989-90ನೇ ಸಾಲುಗಳ ವಾರ್ಷಿಕ ವರದಿಗಳು ಹಾಗೂ 1987-88 ಮತ್ತು 1988-89ನೇ ಸಾಲುಗಳ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು:-ಎಲ್ಲಾ ಕಾಗದ ಪತ್ರಗಳನ್ನು ಮಂಡಿಸಲಾಯಿತು

<u>ವರದಿಗಳನ್ನೊಪ್ಪಿಸುವುದು</u>

ಶ್ರೀ ಆಂಜನಮೂರ್ತಿ: (ಉಪಾಧ್ಯಕ್ಷರು): ಮಾನ್ಯ ಅಧ್ಯಕ್ಷರೇ, ಖಾಸಗೀ ಸದಸ್ಯರ ವಿಧೇಯಕಗಳು ಮತ್ತು ನಿರ್ಣಯಗಳಿಗೆ ಸಂಬಂಧಿಸಿದ ಸಮಿತಿಯ ಮೊದಲನೆಯ ವರದಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು: - ವರದಿಯನ್ನು ಒಪ್ಪಿಸಲಾಯಿತು.

ಡಾ: ಬಿ. ಗಂಗಪ್ಪ: - ಮಾನ್ಯ ಅಧ್ಯಕ್ಷರೇ, (ಶ್ರೀ ಎ.ಎಂ ಹಿಂಡಸಗೇರಿ ಅಧ್ಯಕ್ಷರು, ರವರ ಪರವಾಗಿ) : -

ರಾಯಚೂರು ಜಿಲ್ಲೆ ಕುಷ್ಟಗಿಯ ಅಂಗನವಾಡಿ ಕಾರ್ಯಕರ್ತೆ ಕುಮಾರಿ ಶರಣವ್ವಳ ಮೇಲೆ ನಡೆಯಿತೆನ್ನಲಾದ ಸಾಮೂಹಿಕ ಅತ್ಯಾಚಾರ ಪ್ರಕರಣ ಜಂಟಿ ಸದನ ಸಮಿತಿಯ ವರದಿಯನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಅಧ್ಯಕ್ಷರು: - ವರದಿಯನ್ನು ಒಪ್ಪಿಸಲಾಯಿತು.

ಶ್ರೀ ಹೆಚ್.ವಿಶ್ವನಾಥ್ : ಮಾನ್ಯ ಅಧ್ಯಕ್ಷರೇ, ನಾನು ಒಂದು ಪಾಯಿಂಟ್ ಆಫ್ ಆರ್ಡರ್ ಎತ್ತುತ್ತೇನೆ.